
## ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ (ರಿ)

## H.S.R. BADAVANE BRAHMANA SANGHA (R)

(SOR/BLU/DR/816/2009-10/31-10-2009)

# 56, 4th Floor, "Gayathri Bhavan", 31st Main, 18th Cross, Sector-II, HSR LAYOUT, BANGALORE-560102

www.hsrvipra.co.in ♦ email: hsr.brahmana@yahoo.com


|| ಶಂಕರಂ ಶಂಕರಾಚಾರ್ಯಂ ಶೇಷಂ ರಾಮಾನುಜಂ ಮುನಿಮ್ | ವಾಯುಂ ಚ ಮಧ್ವಮಾಚಾರ್ಯಂ ಆಚಾರ್ಯತ್ರಯಮಾಶ್ರಯೇ ||


# ವಿಪ್ರಬಂಧು


ತ್ರೈಮಾಸಿಕ ಪತ್ರಿಕೆ – ಸಂಚಿಕೆ 14 – ಪುಟಗಳು 16

ಶೋಭಕೃತ್ ಸಂವತ್ಸರ ಹೇಮಂತ ಋತು ಜನವರಿ 2024





ಮಕರ ಸಂಕ್ರಾಂತಿ – ಶ್ರೀರಾಮನವಮಿ ಹಾಗೂ ಶಿವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು

BOOK-POST


With Best Compliments from:
SHASTRY'S BAKERY AND SWEETS
ಶಾಸ್ತ್ರೀಸ್ ಬೇಕರಿ ಮತ್ತು ಸಿಹಿ ತಿಂಡಿಗಳು
# 714/2, 7th Block, K.R. Road, Jayanagar, Bangalore - 560 070
ಸಂತಸದ ಸುದ್ದಿ
ನೂತನವಾಗಿ
ಬನಶಂಕರಿ ಶಾಖೆ
ತೆರೆಯಲಾಗಿದೆ
70, 46ನೇ ಅಡ್ಡರಸ್ತೆ,
ಬನಶಂಕರಿ ಬಸ್ ನಿಲ್ದಾಣದ ಹತ್ತಿರ
ಬನಶಂಕರಿ, ಬೆಂಗಳೂರು
ಸಾರ್ವಜನಿಕರಿಗೆ 33 ವರ್ಷಗಳಿಂದ ಶುದ್ಧ ಪದಾರ್ಥಗಳ ಅವಿರತ ಸೇವೆ. ಎಲ್ಲಾ ಶುಭ ಸಮಾರಂಭಗಳಿಗೆ ಶುದ್ಧವಾಗಿ, ರುಚಿಯಾಗಿ ಬೇಕರಿ ಹಾಗೂ ಸಿಹಿ ತಿನಿಸುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅವಶ್ಯಕತೆಗೆ ಅನುಗುಣವಾಗಿ ತಮ್ಮಲ್ಲಿಗೆ ತಲುಪಿಸಲಾಗುತ್ತದೆ.
ಪ್ರೊ : ಸಂತೇಶಿವರ ಜಯರಾಮು ಮತ್ತು ಸಹೋದರರು
ದೂರವಾಣಿ : 2676 4599
94486 85061, 94803 91152
99869 28281


With Best Compliments From
DOCTOR
SERVING the humanity since 29 years......
RAKSHIT HEALTH
AND COUNSELLING CENTER
" Certified Diabetes Counsellors "
1. #7, (76/1), 7th Cross, 27th Main, 1st Sector, HSR Layout, BANGALORE-560 102
2. #30/1, Munireddy Complex, Mangammanapalya Main Road, Yellukunte, HSR III rd Sector, BANGALORE-560 068.
Dr. B.S. LAKSHMI
BAMS (Ay), BAMS (Integrated)
CNCC (Childcare and Nutrition)
Mobile: 98455 18758
Winner of
GLOBAL HEALTH CARE
EXCELLENCE
AWARD 2013
Dr. AMARNATH T.S.
BSAM (Ay), BAMS (Integrated)
PGDHR (Human Rights)
EMBA (Marketing)
Mobile: 98452 59809

## EXECUTIVE COMMITTEE MEMBERS

| | |
|---|---|
| ***PRESIDENT*** | |
| Anantha Ramu S. | 9448055193 |
| ***VICE-PRESIDENTS*** | |
| Subbaramaiah C.N. | 9448189695 |
| Sridhar Rao H. | 9632211611 |
| ***SECRETARY*** | |
| Ramesh A. | 9008458078 |
| ***TREASURER*** | |
| Ashwathanarayana Rao K.N. | 9449032129 |
| ***JOINT SECRETARIES*** | |
| Anantha M.S. | 9986825761 |
| Narasimha Murthy A.R. | 9844568839 |
| Raghunandan C. | 9167661386 |
| Natesh G.S. | 9448777770 |
| ***EC MEMBERS*** | |
| Narasimhaiah V | 9449028618 |
| Dr. Shyam Sundar G. | 9448676442 |
| Gururaja Rao S. | 9343529635 |
| Ramesh R. | 9880170113 |
| Lakshmana B.G. | 9901311225 |
| Smt. Lakshmi Adiga | 8884122494 |
| Manoja Karantha K. | 8880443064 |
| Narendra Bhat H.G. | 9845173821 |
| Srinivasa S.V. | 7090709946 |
| Subramanya S.N. | 9945034420 |
| Ajeya Krishna K.R. | 9980010021 |
| ***ADVISORS*** | |
| Shankaran V. | 9886659227 |
| Prabhakar H.C. | 9886035210 |
| Ramaswamy K. | 9909948237 |
| Karanth B.D. | 9945802609 |
| Ramachandra Shastry K. | 9448910012 |
| Chandra Kumar H.V. | 9341628718 |
| Koushalendra S.A.P. | 9481487304 |
| Narayanan R. | 9341261659 |
| V. Ranganatha Murali (Audit) | 9844033971 |
| Dr. Sudheendra Bhat (Legal) | 9845103951 |

### Viprabandhu Editorial Committee

| | |
|---|---|
| Sridhar Rao H. | 9632211611 |
| Dr. Shyam Sundar G. | 9448676442 |
| Natesh G.S. | 9448777770 |
| Narasimhaiah V. | 9449028618 |

hsr.viprabandhu@gmail.com


# ಅಧ್ಯಕ್ಷರ ನುಡಿ

ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘದ ಎಲ್ಲಾ ವಿಪ್ರ ಸದಸ್ಯಬಂಧುಗಳಿಗೆ ನಮಸ್ಕಾರಗಳು. ಇದೇ 2023 ನವಂಬರ್ 5ರಂದು ನಮಗೆಲ್ಲ ಹಿರಿಯರಾದ ಶ್ರೀಯುತ ಶ್ರೀನಿವಾಸರಾವ್ ದಂಪತಿಗಳು ತಮ್ಮ ವೈವಾಹಿಕ ಜೀವನದಲ್ಲಿ ಅರ್ಧ ಶತಮಾನ ಪೂರೈಸಿದ ಸಂದರ್ಭಕ್ಕಾಗಿ ವೇದಪಾರಾಯಣ ಹಾಗೂ ದಾಂಪತ್ಯ ಜೀವನದ ಮಹತ್ವ ಹೇಗೆ ಹಾಗೂ ಏಕೆ ಎಂಬುದರ ಬಗ್ಗೆ ವೇದಗುರುಗಳಿಂದ ನಡೆಸಿಕೊಟ್ಟ ಉಪನ್ಯಾಸ, ಜೊತೆಗೆ ಔತಣ ಕೂಟ ಎಲ್ಲವೂ ಯಶಸ್ವಿಯಾಗಿ ನಡೆದದ್ದು ತುಂಬಾ ಹಿತಕರವಾಗಿತ್ತು. ಶ್ರೀಯುತರ ದಾಂಪತ್ಯ ಜೀವನವು ತುಂಬಾ ಸುಖಕರವಾಗಿದ್ದು, ಪರೋಪಕಾರಿಯಾಗಿಯೂ ಸೇವೆ ಸಲ್ಲಿಸಿರುವ ಇವರಿಗೆ ಭಗವಂತನು ದೀರ್ಘಾಯುಷ್ಯ ನೀಡಲೆಂದು ಪ್ರಾರ್ಥಿಸುತ್ತಾ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕಡೇ ಕಾರ್ತೀಕ ಸೋಮವಾರ ಸಾರ್ವಜನಿಕರಿಗಾಗಿ ಪ್ರತಿ ಸಂವತ್ಸರ ರುದ್ರಾಭಿಷೇಕ ದೊಂದಿಗೆ ನಡೆಯುತ್ತಿರುವ ಉತ್ತಮ ಕಾರ್ಯಕ್ರಮ. ಅದರಂತೆ ಈ ಬಾರಿಯೂ ಸಂಘದ ಸದಸ್ಯರೊಬ್ಬರ ಸಮ್ಮುಖದಲ್ಲಿ ಶ್ರೀ ರಾಮಚಂದ್ರಶಾಸ್ತ್ರಿಯವರ ನೇತೃತ್ವದಲ್ಲಿ ತಾರೀಖು 11.12.2023 ರಂದು ವೇದಬಂಧುಗಳ ಸಹಕಾರದಿಂದ ಯಶಸ್ವಿಯಾಗಿ ನಡೆದಿದೆ. ಸದರಿ ಕಾರ್ಯಕ್ರಮಕ್ಕೆ ಸಂಘದ ಒಬ್ಬ ಸದಸ್ಯ ದಂಪತಿಗಳು ಭಾಗವಹಿಸಬಹುದು ಹಾಗೂ ಸಾರ್ವ ಜನಿಕರು ಯಾವುದೇ ಭೇದಭಾವವಿಲ್ಲದೇ ಭಕ್ತಿಭಾವದಿಂದ ಬಂದು ರುದ್ರಾಭಿಷೇಕದಲ್ಲಿ ಸ್ವತಃ ಜಗದೀಶ್ವರನಿಗೆ ಅಭಿಷೇಕ ಮಾಡುವ ಕಾರ್ಯಕ್ರಮ. ಮುಂಬರುವ ದಿನಗಳಲ್ಲಿ ಇಂತಹ ಕಾರ್ಯಕ್ರಮದಲ್ಲಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಮನವಿ ಮಾಡುತ್ತೇನೆ. ಈ ಕಳೆದ ಮೂರು ತಿಂಗಳಲ್ಲಿ ದಸರಾ, ದೀಪಾವಳಿ, ಉತ್ಥಾನದ್ವಾದಶೀ ಹಬ್ಬಗಳನ್ನು ಆಚರಿಸಿ ರುವ ತಮ್ಮೆಲ್ಲರಿಗೂ ಆತ್ಮೀಯ ಅಭಿನಂದನೆಗಳು. 24.11.2023 ರಂದು ಗೀತಾಜಯಂತಿ ಪ್ರಯುಕ್ತ , ಗಾಯತ್ರಿಭವನದಲ್ಲಿ ಗೀತಾಪಾರಾಯಣ ಸುಸೂತ್ರವಾಗಿ ನೆರವೇರಿದೆ.

ತಾರೀಖು 25.12.2023 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯೆ ಶ್ರೀಮತಿ ಶುಭಮಂಗಳ ಸುನಿಲ್ ಹಾಗೂ ದಾನಿ ಶ್ರೀ ಶಂಕರರೆಡ್ಡಿ ಅವರ ಅಮೃತಹಸ್ತದಿಂದ ಬಿಡುಗಡೆಗೊಂಡು ಡಿಸೆಂಬರ್ ಕೊನೆಯ ವಾರದಲ್ಲಿ 2024ರ ಕ್ಯಾಲೆಂಡರು ಎಲ್ಲಾ ಸದಸ್ಯರ ಮನೆಗಳಿಗೆ, ಬಡಾವಣೆಯ ಪ್ರತಿಷ್ಟಿತ ದೇವಾಲಯಗಳಿಗೆ, ಸಂಘಸಂಸ್ಥೆಗಳಿಗೆ ಹಾಗೂ ಜಾಹಿರಾತುದಾರರಿಗೆ ತಲುಪಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸೇವೆ ಸಲ್ಲಿಸಿರುವ ಎಲ್ಲಾ ಕಾರ್ಯಕಾರೀ ಸದಸ್ಯರಿಗೆ ಅನಂತ ಧನ್ಯವಾದಗಳು. ಮಾನ್ಯ ಶಾಸಕರಾದ ಸತೀಶ ರೆಡ್ಡಿಯವರು ಅನಾರೋಗ್ಯನಿಮಿತ್ತ ದಿನದರ್ಶಿ ಬಿಡುಗಡೆ ಸಮಾ ರಂಭಕ್ಕೆ ಬರಲಾಗಿಲ್ಲ, ಅವರು ಶೀಘ್ರ ಗುಣಮುಖರಾಗಲೆಂದು ಹಾರೈಸೋಣ.

ಹೊಸ ವರ್ಷ 2024 ಎಲ್ಲರಿಗೂ ಶುಭವನ್ನು ತರಲೆಂದು ಶುಭಕೋರಿ, 2023ಕ್ಕೆ ವಿದಾಯ ಹೇಳುತ್ತಾ ಎಲ್ಲರಿಗೂ ಸಂಕ್ರಾಂತಿ ಹಾಗೂ ಶಿವರಾತ್ರಿ ಹಬ್ಬದ ಶುಭಾಶಯಗಳು.

॥ ಸರ್ವೇಜನಾಃ ಸುಖಿನೋ ಭವಂತು ॥ ಧನ್ಯವಾದಗಳು.


ಅನಂತರಾಮು ಎಸ್.

ಅಧ್ಯಕ್ಷರು, ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ

# ಕಾರ್ಯದರ್ಶಿ ವರದಿ

ಸನ್ಮಾನ್ಯ, ಗೌರವಾನ್ವಿತ ವಿಪ್ರಬಂಧುಗಳೇ,

ತಮ್ಮೆಲ್ಲರಿಗೂ 2024ರ ಹೊಸ ವರ್ಷಕ್ಕೆ ಸುಸ್ವಾಗತವನ್ನು ಕೋರುತ್ತಾ, ಮುಂಬರುವ ಹಬ್ಬ ಹರಿದಿನಗಳು ಶುಭವನ್ನು ತರಲೆಂದು ದೇವರಲ್ಲಿ ಪ್ರಾರ್ಥಿಸಿ ನಾಲ್ಕನೇ ತ್ರೈಮಾಸಿಕದ ಕಾರ್ಯದರ್ಶಿ ವರದಿಯನ್ನು ತಮ್ಮ ಮುಂದಿಡುತ್ತಿದ್ದೇನೆ.

ದಿನಾಂಕ 18/11/2023ರ ಶನಿವಾರದಂದು ಇಸ್ಕಾನ್‌ನ ಸಹಯೋಗದಲ್ಲಿ, ಸಂಘದ ಗಾಯತ್ರಿ ಭವನದಲ್ಲಿ 'ದಾಮೋದ ರಾಷ್ಟಕಮ್' ಎಂಬ ವಿಶೇಷ ಗೀತೆಯನ್ನು ಹಾಡುವ ಕಾರ್ಯಕ್ರಮವು ಜರುಗಿತು. ಐವತ್ತಕ್ಕೂ ಹೆಚ್ಚು ಮಂದಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ತಿಕ ಮಾಸದ ಮೂರು ಸೋಮವಾರಗಳಲ್ಲಿ, ಸಂಘದ ಎಸ್.ಎಲ್.ಎನ್ ವೇದಪಾಠ ಶಾಲೆಯ ವೇದಬಂಧುಗಳು ಶ್ರೀ ಸೋಮೇಶ್ವರ ದೇವಸ್ಥಾನ, ಅಗರದಲ್ಲಿ, ಏಕಾದಶವಾರ ರುದ್ರಾಭಿಷೇಕ ಸಹಿತ ಪೂಜೆಯನ್ನು ನೆರವೇರಿಸಿಕೊಟ್ಟರು.

ಕಡೆಯ ಕಾರ್ತಿಕ ಸೋಮವಾರದ ಪ್ರಯುಕ್ತ ಹೆಚ್.ಎಸ್.ಆರ್ ಬಡಾವಣೆ ಬ್ರಾಹ್ಮಣ ಸಂಘದ ಶ್ರೀ ಸರ್ವೇಶ್ವರ, ಚಂದ್ರಮೌಳೇಶ್ವರ ಸ್ವಾಮಿಗೆ, ಹೆಚ್.ಎಸ್.ಆರ್. ಸೆಕ್ಟರ್-1ರಲ್ಲಿರುವ ಶ್ರೀ ವಿನಾಯಕ ದೇವಸ್ಥಾನದಲ್ಲಿ ಸಂಜೆ ಪೂಜೆ ಮತ್ತು ರುದ್ರಾಭಿಷೇಕವನ್ನು ಶ್ರೀ.ಕೆ. ರಾಮಚಂದ್ರ ಶಾಸ್ತ್ರಿ ಅವರ ನೇತೃತ್ವದಲ್ಲಿ, SLN ವೇದಬಂಧುಗಳ, ಸದಸ್ಯರೆಲ್ಲರ ಸಹಕಾರದೊಡನೆ ಜರುಗಿತು. ನೆರೆದಿರುವ ಭಕ್ತಾದಿಗಳಿಗೆ ಕ್ಷೀರ ಅಭಿಷೇಕವನ್ನು ಮಾಡುವ ಅವಕಾಶವನ್ನು ಕಲ್ಪಿಸಲಾಗಿತ್ತು. ಪೂಜೆಯನ್ನು ಸಂಘದ ಹಿರಿಯ ಸದಸ್ಯರಾದ ಶ್ರೀ ಸುಂದರ್ ದಂಪತಿಗಳು ನಿರ್ವಹಿಸಿದರು.

ದಿನಾಂಕ 23-12-2023 ಶನಿವಾರದಂದು ಬೆಳಿಗ್ಗೆ ವೈಕುಂಠ ಏಕಾದಶಿ ಪ್ರಯುಕ್ತ, ಪ್ರತಿ ವರ್ಷದಂತೆ, ಈ ವರ್ಷವೂ ಅಗರದಲ್ಲಿರುವ ಶ್ರೀ ಚೆನ್ನಿಗರಾಯ ಸ್ವಾಮಿ ದೇವಸ್ಥಾನ ಹಾಗೂ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನಗಳಲ್ಲಿ ವೇದ ಪಾರಾಯಣವನ್ನು SLN ವೇದ ಪಾಠಶಾಲೆ ಸದಸ್ಯರಿಂದ ಜರುಗಿಸಲಾಯಿತು.

ದಿನಾಂಕ 24/12/2023ರ ಭಾನುವಾರದಂದು ಶ್ರೀ ಗೀತಾ ಜಯಂತಿಯನ್ನು ಪೂಜ್ಯ ವೇದಗುರುಗಳ ನೇತೃತ್ವದಲ್ಲಿ ಜರುಗಿಸ ಲಾಯಿತು.

ಸಂಘದ ಜಾಹಿರಾತನ್ನೊಳಗೊಂಡ ವರ್ಣರಂಜಿತ ದಿನದರ್ಶಿ ಯನ್ನು ದಿನಾಂಕ 25/12/2023ರ ಸೋಮವಾರದಂದು, ಸಂಘದ ಗಾಯತ್ರಿ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ದಾನಿ ಗಳಾದ ಶ್ರೀ ಎಂ.ಶಂಕರ ರೆಡ್ಡಿ ಹಾಗೂ ಶ್ರೀಮತಿ.ಡಾ॥ ಶುಭಮಂಗಳ ಸುನಿಲ್‌ರವರನ್ನು ಆಹ್ವಾನಿಸಲಾಗಿತ್ತು.

### ನೂತನವಾಗಿ ನಮ್ಮ ಸಂಘಕ್ಕೆ ಆಗಮಿಸಿದ ಸದಸ್ಯರು (26/09/2023 ರಿಂದ 25/12/2023 ರವರೆಗೆ)

1. ಶ್ರೀ ಹರಿಹರನ್ ಕಲ್ಯಾಣ ಕೃಷ್ಣನ್ — ಸ. ಸಂಖ್ಯೆ, ಪೋಷಕರು (P) 758 Dt: 05/11/2023.
2. ಶ್ರೀ ರಘುನಾಥ್. ಎನ್ — ಸ. ಸಂಖ್ಯೆ, ಪೋಷಕರು (P)759 dt: 05/11/2023.
3. ಶ್ರೀ ಚೇತನ್.ಎನ್. — ಸ. ಸಂಖ್ಯೆ, ಪೋಷಕರು (P)760 Dt: 05/11/23
4. ಶ್ರೀ ರಮೇಶ್ ಕುಮಾರ್ — ಸ. ಸಂಖ್ಯೆ, ಪೋಷಕರು (P)761 dt: 05/11/2023.
5. ಶ್ರೀಮತಿ ಬಿ. ರಾಜಲಕ್ಷ್ಮಿ — ಸ. ಸಂಖ್ಯೆ, 762 dt: 04/12/2023.
6. ಶ್ರೀ ಕೆ.ಎಸ್.ಸುರೇಶ್ — ಸ. ಸಂಖ್ಯೆ, 763 dt: 04/12/2023.
7. ಶ್ರೀ ಶ್ರೀಹರಿ ಶ್ರೀನಿವಾಸನ್ — ಸ. ಸಂಖ್ಯೆ, ಪೋಷಕರು(P)764 Dt: 04/12/23

VIVEKANANDAHEALTH® GLOBAL
AYURVEDA | YOGA | NATUROPATHY
We are a chain of Integrative Medicine Centers , Headquartered in Bengaluru

Centers in Bengaluru: HSR and HRBR layout
WE OFFER
◆ Preventive Healthcare Services:
Prevent Diabetes, Hypertension, Hypothyroidism, PCOS, Obesity
◆ Healing Solutions:
Cervical & Lumbar Spondylitis, Sciatica, Arthritis, Migraine Headache, PCOS, Infertility
◆ Corporate Health and Well-being Programs:
Spine Health, Eye Health, Stress Management, Women Health
To Associate Call - +91 9901483222
To Consult Doctors Call -+ 919591336226
www.vivekanandahealth.com

8. ಶ್ರೀಮತಿ ವಸುಧಾ ಎಂ ಶರ್ಮಾ ಸ. ಸಂಖ್ಯೆ, ಪೋಷಕರು (P)765

dt: 04/12/2023.

ಸಂಘದ ಸದಸ್ಯರಾದ ಶ್ರೀ ಶೈಲೇಂದ್ರ. ವಿ.ಆರ್. ಅವರು 28.12.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಇಂತಿ ತಮ್ಮವ,

ಕಾರ್ಯದರ್ಶಿ

# ಪ್ರಕಟಣೆ

ಹೆಚ್. ಎಸ್. ಆರ್. ಬಡಾವಣೆ ಬ್ರಾಹ್ಮಣ ಸಂಘವು ಆಯೋಜಿಸಿರುವ/ಮುಂಬರುವ ಕಾರ್ಯಕ್ರಮಗಳು ಮತ್ತು ಪ್ರವಚನಗಳ ವಿಡಿಯೋ ರಿಕಾರ್ಡಿಂಗ್ ಗಳನ್ನು ಅಪಲೋಡ್ ಮಾಡಲು ಈಗ, ಸಂಘದ ವತಿಯಿಂದಲೇ ಯೂಟ್ಯೂಬ್ ಚಾನೆಲ್‌ನ್ನು ತೆರೆದಿದೆ. ನಮ್ಮೆಲ್ಲಾ ಕಾರ್ಯಕ್ರಮವನ್ನು ವೀಕ್ಷಿಸಲು ನಮಗೆ ನಿಮ್ಮ ಬೆಂಬಲದ ಅಗತ್ಯವಿದೆ. ದಯವಿಟ್ಟು, ನಮ್ಮ **HSRBBS Youtube Channel** ಗೆ ಚಂದಾದಾರರಾಗಿ. ಮೇಲೆ ನೀಡಿರುವ **QR CODE** ನ್ನು ಸ್ಕ್ಯಾನ್ ಮಾಡಲು ಕೋರಲಾಗಿದೆ.

# ಸದಸ್ಯರಲ್ಲಿ ವಿನಂತಿ..

ಸಂಘದ **ಗಾಯತ್ರಿ ಭವನವನ್ನು** (ನಂ. 56, 4ನೇ ಮಹಡಿ, 31ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆ, ಹೆಚ್.ಎಸ್.ಆರ್ 2ನೇ ಸೆಕ್ಟರ್, ಬೆಂಗಳೂರು-560102) ಶುಭ ಕಾರ್ಯಕ್ರಮಗಳಿಗೆ (ಹುಟ್ಟಿದ ಹಬ್ಬ, ದೇವತಾ ಪೂಜಾ, ಪ್ರವಚನ ಇತ್ಯಾದಿ) ಸಂಘದ ಸದಸ್ಯರು ಹಾಗೂ ಕುಟುಂಬವರ್ಗದವರಿಗೆ ನಿಗದಿತ ದಾನ ಪಾವತಿ ಮೇರೆಗೆ ಕೆಳಕಂಡ ನಿಬಂಧನೆಗಳೊಂದಿಗೆ ನೀಡಲಾಗುತ್ತದೆ.

★ ಬೆಳಿಗ್ಗೆ 6.30ರಿಂದ ಸಂಜೆ 4.00ರ ತನಕ.

★ 80-100 ಜನಗಳ ವರೆಗೆ ಮಾತ್ರ ಅವಕಾಶ

★ 10 ಡೈನಿಂಗ್ ಟೇಬಲ್‌ಗಳು, 60 ಕುರ್ಚಿಗಳು ಹಾಗೂ 4 ದೊಡ್ಡ ಜಮಖಾನಗಳ ಸೌಲಭ್ಯವಿದೆ.

★ ವೆಜಿಟೇರಿಯನ್ ಕ್ಯಾಟರಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ (ಅಡಿಗೆ ಮಾಡಲು ಅವಕಾಶವಿರುವುದಿಲ್ಲ).

★ ಕ್ಲೀನಿಂಗ್ ವ್ಯವಸ್ಥೆ ನಿಮ್ಮದಾಗಿರುತ್ತದೆ.

★ ಕಾರ್ಯಕ್ರಮಕ್ಕೆ ಬರುವವರು ತಮ್ಮ ಕಾರುಗಳನ್ನು ಪೋಸ್ಟ್ ಆಫೀಸ್ ಎದುರು ಅಥವಾ ಗಾಯತ್ರೀ ಭವನದ ಹಿಂಭಾಗದ ರಸ್ತೆಯಲ್ಲಿ ನಿಲ್ಲಿಸಬೇಕಾಗುತ್ತದೆ.

★ ಒಂದು ರೂಮನ್ನು ನೀಡಲಾಗುವುದು

★ ದಾನ ಪಾವತಿ ವಂತಿಕೆ - ರೂ.3500/- + ಕ್ಲೀನಿಂಗ್ ಚಾರ್ಜಸ್ ರೂ.500/- ಒಟ್ಟು-ರೂ. 4000/-ಮಾತ್ರ

ವಿವರಗಳಿಗೆ ಮತ್ತು ಕಾದಿರಿಸುವಿಕೆಗಾಗಿ ಕಾರ್ಯದರ್ಶಿಗಳನ್ನು ಸಂಪರ್ಕಿಸಿ.

ವಂದನೆಗಳೊಂದಿಗೆ.

– ಕಾರ್ಯದರ್ಶಿ

*Suresh Hegde Kadathoka* Mob : 9986509511
9945089428 / 9448689300

**SHRI RAMANUGRAHA CATERERS**

We undertake Pure Vegetarian Catering for all occasions such as

**WEDDING–UPANAYANAM–HOUSE WARMING-NAMING CEREMONY**

'Sri Rama Krupa', # 24, Opp. Vishwapriya Digital Studio Road,
Patel Layout, Begur, Bangalore-560 068

# ಸಂಪಾದಕೀಯ

ರಾಷ್ಟ್ರೀಯ ಅಸ್ಮಿತೆಯಾಗಿರುವ ಹಿಂದೂಗಳ ಶ್ರದ್ಧಾ ಕೇಂದ್ರ, ಅಯೋಧ್ಯೆ ಶ್ರೀ ರಾಮಮಂದಿರದ ಉದ್ಘಾಟನಾ ಸಂದರ್ಭದಲ್ಲಿ ಈ ಬಾರಿಯ ತ್ರೈಮಾಸಿಕವನ್ನು ನಿಮ್ಮ ಮುಂದಿಡಲು ನಮಗೆ ಹೆಮ್ಮೆ ಎನಿಸುತ್ತದೆ. ತ್ರೇತಾಯುಗದಲ್ಲಿ ಜನಿಸಿದ ರಾಮ, ದ್ವಾಪರಯುಗದ ನಂತರ ಕಲಿಯುಗದಲ್ಲಿಯೂ ಪುರುಷೋತ್ತಮನಾಗಿ ವಿಜೃಂಭಿಸುತ್ತಿದ್ದಾನೆ ಎಂದರೆ, ಶ್ರೀರಾಮ ಯುಗಪುರುಷ ಮಾತ್ರವಲ್ಲ, ಯುಗ ಯುಗಾಂತರ ಪುರುಷನೇ ಸರಿ. ಈ ದೇವತಾ ಸ್ವರೂಪಿ ಶ್ರೀರಾಮನ ಮಂದಿರ ಲೋಕಾರ್ಪಣ ಶುಭಸಂದರ್ಭಕ್ಕೆ ನಿಮಗೆಲ್ಲರಿಗೂ ಹಾರ್ದಿಕ ಅಭಿನಂದನೆಗಳು.

ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ, ಆಧ್ಯಾತ್ಮಿಕ, ಸಾಮಾಜಿಕ ಕಳಕಳಿಯ ಹಲವಾರು ಕಾರ್ಯಕ್ರಮಗಳನ್ನು ವರ್ಷ ಪರ್ಯಂತ ಆಚರಿಸಿಕೊಂಡು ಬರುತ್ತಿದ್ದು, ನಮ್ಮ ಬಡಾವಣೆ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ತನ್ನದೇ ಛಾಪನ್ನು ಮೂಡಿಸಿ ಕೊಂಡು ಮುನ್ನಡೆಯುತ್ತಿದೆ.

ನಿರಂತರವಾಗಿ ನಡೆಯುತ್ತಿರುವ, ವೇದ ಪಾಠಶಾಲೆ, ಯೋಗ ತರಗತಿಗಳು ಬಹಳಷ್ಟು ಜನಪ್ರಿಯ ವಾಗಿವೆ. ಈ ಅವಕಾಶಗಳನ್ನು ಇನ್ನಷ್ಟು ಬ್ರಾಹ್ಮಣ ಬಂಧುಗಳು ಸದ್ವಿನಿಯೋಗ ಪಡಿಸಿಕೊಳ್ಳಬೇಕಾಗಿ ವಿನಂತಿಸುತ್ತೇವೆ. ಇದು ಖಂಡಿತವಾಗಿಯೂ ನಿಮ್ಮ ಯಾಂತ್ರಿಕ ಬದುಕಿನಲ್ಲಿ ನಿಮಗೆ ಹೆಚ್ಚಿನ ಸಾಂತ್ವನ, ಹಾಗೂ ಸಕಾರಾತ್ಮಕ ಬದಲಾವಣೆಗಳನ್ನು ನೀಡೀತು ಎನ್ನುವುದು ನಿಸ್ಸಂಶಯ.

ವಿಪ್ರಬಂಧು ಕಳೆದ 12 ವರ್ಷಗಳಿಂದ ಅನೇಕಾನೇಕ ಅಧ್ಯಾತ್ಮಿಕ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಬರವಣಿಗೆಗಳನ್ನು ನೀಡಿ ಓದುಗರ ಆದರಕ್ಕೆ ಪಾತ್ರವಾಗಿದೆ. ವಿಪ್ರಬಂಧುವನ್ನು ಇನ್ನೂ ಹೆಚ್ಚು ಹೆಚ್ಚು ಜನಾನುರಾಗಿಯಾಗಿಸಲು, ಮುಂದಿನ ಸಂಚಿಕೆಯಿಂದ ಸಂಘದ ಸದಸ್ಯರ ಹಾಗೂ ಅವರ ಕುಟುಂಬದ ಸಾಧನೆ, ಹಿರಿಮೆ ಮತ್ತಿತರ ಹೆಮ್ಮೆಯ ಕ್ಷಣಗಳನ್ನು ನಮ್ಮೊಡನೆ ಹಂಚಿಕೊಳ್ಳಿ ಎಂದು ಆಶಿಸುತ್ತೇವೆ.

ವಿಪ್ರಬಂಧು ಪತ್ರಿಕೆಯನ್ನು ಯಶಸ್ವಿಯಾಗಿಸಲು ಸದಾ ಕಾಲವೂ ಶ್ರೀರಕ್ಷೆ ನೀಡಿರುವುದು ಮಾನನೀಯ ಜಾಹೀರಾತುದಾರರು. ಅವರೆಲ್ಲರಿಗೂ ಬ್ರಾಹ್ಮಣ ಸಂಘವು, ಸಂಪಾದಕೀಯ ಮಂಡಳಿಯೂ ಹಾರ್ದಿಕ ಅಭಿವಂದನೆಗಳನ್ನು ಸಲ್ಲಿಸುತ್ತಿದೆ. ಇದೇ ರೀತಿಯಲ್ಲಿ ಸಂಘದ ಎಲ್ಲ ಕಾರ್ಯಕ್ರಮಗಳಿಗೂ ಪ್ರೋತ್ಸಾಹ ನೀಡಬೇಕೆಂದು ವಿನಂತಿ.

ಮುಂದೆ ಬರಲಿರುವ ಸಂಕ್ರಾಂತಿ, ಶಿವರಾತ್ರಿ, ಯುಗಾದಿ ಹಬ್ಬಗಳಿಗೆ ಶುಭಾಶಯಗಳನ್ನು ಕೋರುತ್ತಾ, ಶ್ರೀರಾಮ ಮಂದಿರದ ಆರಂಭೋತ್ಸವಕ್ಕೆ ನಾವೆಲ್ಲರೂ ಸಜ್ಜಾಗೋಣ, ಎಲ್ಲರಿಗೂ ಶುಭ ವಾಗಲಿ. ವಂದನೆಗಳೊಂದಿಗೆ,

**ಹೆಚ್. ಶ್ರೀಧರ ರಾವ್**
ಸಂಪಾದಕೀಯ ಮಂಡಳಿ ಪರವಾಗಿ

Sankalp Nethralaya
& Polyclinic
(A UNIT OF SUBHSANKALP NETHRALAYA & POLYCLINIC PVT. LTD.)
NABH CERTIFIED
ISO 9001 : 2017
One Stop Solution For All Eye Related Problems & Surgeries
Centre Of Excellence For Laser Cataract Surgeries
Cashless Facility available for all Major TPA Insurance
SN1: 85/1 19th Main Road, Sector 1, HSR Layout, Bangalore - 560102 Tel: 080 22580466 | Mob: 9739724666
SN2: #87, Ground Floor, Ashraya Building, Central Jail Road, Naganathpura, Electronic City Post; Bangalore - 560100 Tel: 080 25735556 | Mob: 8147323555
Email: sankalpnethralaya@gmail.com
Timings : 10am to 8pm

ANAND DIAGNOSTIC LAB
A Neuberg Associate
In Association with SANKALP DIAGNOSTIC LAB
Now at HSR Layout
# 511, 15th C Main, 15th Cross, Sector 4, HSR Layout, Bangalore 560 102.
For all Blood Investigations, ECG & Ultra Sound
Ph : 080 4147 9460 / Mob : 89511 64466
Timings : 7am to 7pm

# YOGA CLASSES

## -Opinion by Saadhakas.

### *Opinion 1:*

We, the senior citizens', felt the need to be in perfect health post Covid, and other health imbalances. Accordingly in order to keep ourselves active and lead a life filled with positive energy and consciousness we preferred to join the Yoga class being conducted by the Yogaguru Sri Narayanan.

Two days in a week, the classes are taken and trained by our yoga guru in details and in a structured manner. The initial classes focused on pre warm up exercises, which is important to breath control and to achieve general flexibility of the body through basic exercises.

The following session covered how to perform Surya Namaskar and Asanas. These are very helpful in keeping our body flexible and stay with positive energy and a balanced mind.

We are highly benefited by attending the yoga classes. Yoga bring-in transformation in our lives. We are improved and controlled our physical, mental and spiritual levels. We are able to stay focus and see an improvement in our state of consciousness.

In general, our lifestyle has changed, with the control of mind and leading to happiness. We are grateful to our teacher Guru R Narayanan for having given us a learning and practicing opportunity of yoga. And our sincere thanks to HSR Badavane Brahmana Sangha for having provided this opportunity.

Our humble request to all the senior citizens like us, to make use of this great opportunity and improve your life style.

***S. Rangarajan and Suchitra R.***
*Yoga Sadhakaas.*

### *Opinion 2:*

Yoga classes with Guru Narayanan is amazing. He really encourages us to do our best in his class, with his highly professional approach. I have actually felt the many benefits, on account of yoga classes in my physical as well mental health. Guruji, is so thorough, and he is aware of so many details and help the yoga Saadakaas to get the best out of it. I am so happy that I got an opportunity to attend this classes. I highly recommend it to everybody, it is really good for your mind, soul and body. Having completed almost 2 years of class with Guruji, it is really helped in every sphere of my life with great experiences. My sincere request is to have more classes of Yoga and in addition Meditation and Pranayama classes also. My sincere gratitude to the great social service by Sri Narayanan and HSR Badavane Brahmana Sanga.

***Smt. Vrinda Malatheesh.***

With Best Compliments From
DEEPAMM HOME APPLIANCE
A Convenient Destination for Affordable Household Products
HSR Layout Leading Home Appliances Shop
Wholesale & Retail dealers in: Grinder, Cooker, Fans,Non Stick Cookware, LPG Stove, All kinds of Home Appliances
GOOGLE MAPS
Butterfly Good for a lifetime | HAVELLS | SUJATA | BAJAJ | Crompton Greaves | Prestige | Preethi | Pigeon
MANGAMMANAPALYA MAIN ROAD, BANGALORE -560068
MOB: 90196 19182 / 99003 15425

# ಶ್ರೀ ರಾಮ ಜನ್ಮಭೂಮಿ



ಸರಯೂ ನದಿಯ ತೀರದಲ್ಲಿರುವ ಅಯೋಧ್ಯೆ ಭಾರತೀಯರ ಆರು ಪವಿತ್ರ ಸ್ಥಳಗಳಲ್ಲಿ ಒಂದೆಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ತ್ರೇತಾಯುಗದಲ್ಲಿ ಪುರುಷೋತ್ತಮ ಶ್ರೀರಾಮನು ಜನ್ಮ ತಾಳಿದ್ದರಿಂದ ಈ ಸ್ಥಳವನ್ನು ರಾಮ ಜನ್ಮಭೂಮಿ ಎಂದು ಕರೆಯಲಾಗುತ್ತದೆ.

ಇಸ್ಲಾಮಿಕ್ ಆಕ್ರಮಣಕಾರರು, ಭಾರತದಲ್ಲಿ ಸಾವಿರಾರು ದೇವಾಲಯಗಳನ್ನು ನೆಲಸಮಗೊಳಿಸಿದರು ಮತ್ತು ಅವುಗಳ ಮೇಲೆ ಮಸೀದಿಗಳನ್ನು ನಿರ್ಮಿಸಿದರು. ಅದರಲ್ಲಿ ಅಯೋಧ್ಯೆಯ ಶ್ರೀರಾಮ ಮಂದಿರವೂ ಒಂದು. ಆದರೆ ನಮ್ಮ ಋಷಿಗಳು, ಮಠಾಧೀಶರು, ಗುರುಗಳು, ಶಿವನ ಕಾಶಿ, ಕೃಷ್ಣನ ಜನ್ಮದ ಮಥುರೆ, ಮತ್ತು ಅಯೋಧ್ಯೆ-ರಾಮನ ಜನ್ಮಭೂಮಿಯ ನೆನಪುಗಳನ್ನು ಮಸುಕಾಗಲು ಬಿಡಲಿಲ್ಲ, ಅವು ಕೇವಲ ಭೂಭಾಗಗಳಲ್ಲ- ಧರ್ಮದ ನರಕೇಂದ್ರಗಳು. ಅತ್ಯಂತ ಘೋರಪರಿಸ್ಥಿತಿಯಲ್ಲೂ, ಬರ್ಬರತೆಯನ್ನು ಸಹಿಸಿತೇ ಹೊರತೂ, ಹಿಂದೂ ಮನಸ್ಸು ಇವುಗಳಿಗಾಗಿ ಹೋರಾಟವನ್ನು ಬಿಡಲಿಲ್ಲ.

ರಾಮ ಜನ್ಮಭೂಮಿಗಾಗಿ ಸಾವಿರಾರು ಹಿಂದೂಗಳು ಮತ್ತು ಸಿಖ್ಖರು ಶ್ರಮಿಸಿದರು. ಗೋಸ್ವಾಮಿ ತುಳಸಿದಾಸ್ ಮತ್ತು ಇತರ ಭಕ್ತ ಸಂತರು ಮತ್ತು ಕವಿಗಳು ಅವರ ಸ್ಮರಣೆಯನ್ನು ಜೀವಂತವಾಗಿಟ್ಟರು. ಹಿಂದೂಗಳ ಧರ್ಮವನ್ನು ಜೀವಂತವಾಗಿರಿಸುವುದು ಶ್ರೀರಾಮ ಮತ್ತು ಅವನ ಹೆಸರು ಎಂದು ನಂಬಿದ್ದರಿಂದ, ಯಾವುದೇ ಜಾತಿ ಅಥವಾ ಪಂಥ ಎಂದು ಪರಿಗಣಿಸದೆ, ಸಮಸ್ತ ಹಿಂದೂಗಳು, ಆಸ್ಥೆಯಿಂದ ಶ್ರೀರಾಮ ಮತ್ತು ಅವನ ಜನ್ಮಸ್ಥಳದ ಹೋರಾಟವನ್ನು ಎಂದಿಗೂ ತ್ಯಜಿಸಲಿಲ್ಲ, ರಾಮ ಇಲ್ಲ ಎಂದಾದರೆ, ಧರ್ಮವೂ ಇಲ್ಲ ಎಂಬುದು ಅವರ ಸಿದ್ಧಾಂತವಾಗಿತ್ತು.

ಬಾಬರಿ ಮಸೀದಿಯ ಕೆಳಗೆ ದೇವಾಲಯವಿದೆ ಎಂದು ತಮ್ಮ ಮಕ್ಕಳಿಗೆ ಎಂದಿಗೂ ಮರೆಯಲು ಬಿಡದ ಹಿಂದೂಗಳಿಗೆ ನಾವು ಋಣಿಯಾಗಿರಬೇಕು. ನಿರಂತರವಾಗಿ ಈ ಶ್ರದ್ಧಾಕೇಂದ್ರದ ಬಗ್ಗೆ ಬರೆಯುತ್ತಿದ್ದ ಹೆಸರಿಲ್ಲದ ಹಿಂದೂಗಳಿಗೆ ನಾವು ಋಣಿಯಾಗಿರಬೇಕು. ರಾಮ ಜನ್ಮಭೂಮಿಯಲ್ಲಿ ಅಡೆ-ತಡೆಗಳ ಮಧ್ಯೆಯೂ ಪೂಜೆ ಸಲ್ಲಿಸುತ್ತಿರುವ ಹೆಸರಿಲ್ಲದ ಹಿಂದೂಗಳಿಗೆ ನಾವು ಋಣಿಯಾಗಿರಬೇಕು.

ಐದು ದೀರ್ಘ ಶತಮಾನಗಳ ಕಾಲ, ಸ್ಪಷ್ಟವಾಗಿ ಒಂದು ತುಂಡು ಭೂಮಿಗಾಗಿ ಹೋರಾಡುತ್ತಾ, ಪ್ರತಿ ಹಿಂಸೆ ಮತ್ತು ಕಷ್ಟಗಳನ್ನು ಎದುರಿಸುತ್ತಾ, ಶ್ರೀ ರಾಮ ಜನ್ಮ ಭೂಮಿಯನ್ನು ಪುನಃ ಪಡೆಯಲೇಬೇಕೆಂದು ಸಂಕಲ್ಪಿಸಿ, ಸದಾಕಾಲ ಅದಕ್ಕಾಗಿ ಹೋರಾಡುವುದನ್ನು ನಿಲ್ಲಿಸಲಿಲ್ಲ, ಅನಾಗರಿಕ ಮೊಘಲರನ್ನು, ವಿದೇಶಿಯರ ಗುಲಾಮಗಿರಿಯನ್ನು ಮತ್ತು ಶತಮಾನಗಳ ನರಮೇಧವನ್ನು ಎದುರಿಸಿದ ಅಂತಹ ಜನರನ್ನು ನೀವು ಏನೆಂದು ಕರೆಯುತ್ತೀರಿ? ರಾಮಜನ್ಮಭೂಮಿ ವಿಮೋಚನಾ ಚಳವಳಿಯು ಐದು ಶತಮಾನಗಳ ಕಾಲ ಜನರು ನಡೆಸಿದ ಅಪರೂಪದ ಹೋರಾಟಗಳಲ್ಲಿ ಒಂದಾಗಿದೆ.

**ಸುದೀರ್ಘ ಕಾನೂನು ಹೋರಾಟ:** ಬಾಬರಿ ಮಸೀದಿ-ರಾಮ ಜನ್ಮಭೂಮಿ ವಿವಾದವು ಹದಿನಾರನೇ ಶತಮಾನದಷ್ಟು ಹಿಂದಿನದು, ಬಾಬರ್ ಸೂಚನೆಗಳ ಅಡಿಯಲ್ಲಿ, ಅಯೋಧ್ಯೆಯಲ್ಲಿ ಅಸ್ತಿತ್ವದಲ್ಲಿರುವ ಹಿಂದೂ ದೇವಾಲಯದ ಮೇಲೆ ಬಾಬರಿ ಮಸೀದಿಯನ್ನು ನಿರ್ಮಿಸಲಾಯಿತು. ಐತಿಹಾಸಿಕ ದಾಖಲೆಗಳು, ಮಸೀದಿಯನ್ನು 1528-29 ರಲ್ಲಿ ಹಿಂದೂಸ್ಥಳದಲ್ಲಿ ಇಸ್ಲಾಮಿಕ್ ಆಳ್ವಿಕೆಯನ್ನು ಸಂಕೇತಿಸಲು ನಿರ್ಮಿಸಲಾಗಿದೆ ಎಂದು ಸೂಚಿಸುತ್ತದೆ. ಹಿಂದೂಗಳು ಮತ್ತು

Nagaraj
M: 9845191648

Pratap
M : 9742142281

**STANDARD PRINTERS**

*Multi Colour Offset Prints*

No. 22, 6th Cross, Rangappa Road, Kamakya Layout,
BSK 3rd Stage, 5th Block, Bangalore - 560 085

ಮುಸ್ಲಿಮರ ನಡುವಿನ ಉದ್ವಿಗ್ನತೆಗಳು ಶತಮಾನಗಳಿಂದಲೂ ಮುಂದುವರೆದವು, ಬ್ರಿಟಿಷ್ ಆಳ್ವಿಕೆಯಲ್ಲಿ 1853ರಲ್ಲಿ ಇದು ಕಾನೂನು ಪ್ರಕ್ರಿಯೆಯ ಒಳಗೆ ಬಂತು.

1853 ರಲ್ಲಿ ಫೈಜಾಬಾದ್ ಜಿಲ್ಲಾ ನ್ಯಾಯಾಲಯವು ಹೊರಗಿನ ಪ್ರಾಂಗಣವನ್ನು ಹಿಂದೂಗಳಿಗೆ ಮತ್ತು ಮಸೀದಿಯನ್ನು ಮುಸ್ಲಿಮರಿಗೆ ನೀಡಿತು. 1857 ರಲ್ಲಿ, ಮೊದಲ ಸ್ವಾತಂತ್ರ್ಯ ಸಂಗ್ರಾಮದ ನಂತರ, ಹಿಂದೂ ಸಾಧುಗಳು ಮಸೀದಿಯ ಹೊರಗಿನ ಪ್ರದೇಶವನ್ನು ಪುನಃ ವಶಪಡಿಸಿಕೊಂಡರು, ಪೂಜೆಗಾಗಿ ಸ್ತಂಭವನ್ನು ಸ್ಥಾಪಿಸಿದರು. 1885 ರಲ್ಲಿ ದೇವಾಲಯ ನಿರ್ಮಾಣಕ್ಕಾಗಿ ಕಾನೂನು ಮನವಿಗಳನ್ನು ತಿರಸ್ಕರಿಸಲಾಯಿತು. ಭೂಮಿಯನ್ನು ಮರಳಿ ಪಡೆಯುವ ಚಳುವಳಿಯು ಇಪ್ಪತ್ತನೇ ಶತಮಾನದಲ್ಲಿ ವೇಗವನ್ನು ಪಡೆಯಿತು. ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಮಾತ್ರವಲ್ಲದೆ ವಿವಿಧ ಮುಸ್ಲಿಂ ಬಣಗಳ ನಡುವೆಯೂ ವಿವಾದಗಳು ನಡೆದವು.

1949ರಲ್ಲಿ, ಭಗವಾನ್ ರಾಮ ಮತ್ತು ಅವರ ಸಹೋದರರ ಮೂರ್ತಿಗಳು ಮಸೀದಿಯೊಳಗೆ ಕಂಡುಬಂದದ್ದು ಉದ್ವಿಗ್ನತೆಗೆ ಕಾರಣವಾಯಿತು. ಜವಾಹರಲಾಲ್ ನೆಹರು ಅವರನ್ನು ತೆಗೆದುಹಾಕಲು ಆದೇಶಿಸಿದರೂ, ಸ್ಥಳೀಯ ಅಧಿಕಾರಿಗಳು ನಿರಾಕರಿಸಿದರು. ಇದರಿಂದಾಗಿ ಸೈಟ್ ವಿವಾದಿತವಾಗಿದೆ ಎಂದು ಘೋಷಿಸಲಾಯಿತು. ಸ್ವಾತಂತ್ರ್ಯದ ನಂತರ, ನ್ಯಾಯಕ್ಕಾಗಿ, ನ್ಯಾಯಾಲಯಗಳಲ್ಲಿ ಹಲವು ಹಿಂದೂಪರ ಸಂಘಟನೆಗಳು ಅರ್ಜಿಗಳನ್ನು ಸಲ್ಲಿಸಲಾಯಿತು, ಚಳುವಳಿಗಳನ್ನೂ ಹಮ್ಮಿಕೊಂಡರು.

1980 ರ ದಶಕದಲ್ಲಿ ವಿಶ್ವ ಹಿಂದೂ ಪರಿಷತ್ (ವಿಹೆಚ್‌ಪಿ) ಮತ್ತು ಭಾರತೀಯ ಜನತಾ ಪಕ್ಷ (ಬಿಜೆಪಿ) ತೊಡಗಿಸಿಕೊಂಡಾಗ ಚಳುವಳಿ ತೀವ್ರಗೊಂಡಿತು. 1986ರಲ್ಲಿ, ಫೈಜಾಬಾದ್ ನ್ಯಾಯಾಲಯ ಹಿಂದೂ ಪೂಜೆಗಾಗಿ ಆವರಣದ ಬೀಗ ತೆರೆಯಲು ಆದೇಶಿಸಿತು.

1989ರಲ್ಲಿ ಬಿಜೆಪಿಯ ನಿರ್ಣಯ ಮತ್ತು ಮಾನ್ಯ ಎಲ್.ಕೆ. ಅಡ್ವಾಣಿಯವರ ರಥಯಾತ್ರೆಯು ಹಿಂದೂಗಳಿಗೆ ನಿವೇಶನವನ್ನು ಹಿಂದಿರುಗಿಸುವ ಬೇಡಿಕೆಯನ್ನು ಮತ್ತಷ್ಟು ಹೆಚ್ಚಿಸಿತು. 6, ಡಿಸೆಂಬರ್ 1992 ರಂದು ಬಾಬರಿ ಮಸೀದಿಯ ಧ್ವಂಸವು ಒಂದು ಮಹತ್ವದ ತಿರುವು ನೀಡಿತು. ಇದು ಸುದೀರ್ಘ ಕಾನೂನು ಹೋರಾಟವನ್ನು ಮತ್ತೆ ಮುನ್ನೆಲೆಗೆ ತಂದಿತು.

ಈ ಘಟನೆಯ ನೈತಿಕ ಹೊಣೆಹೊತ್ತು ಕಲ್ಯಾಣ್ ಸಿಂಗ್ ತನ್ನ ಮುಖ್ಯಮಂತ್ರಿ ಪದವಿಯನ್ನು ತ್ಯಾಗ ಮಾಡಿ ರಾಜೀನಾಮೆ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸಿದರು. ಇದರೊಂದಿಗೆ ಉತ್ತರ ಪ್ರದೇಶದಲ್ಲಿ ಬಿಜೆಪಿ ಮೊದಲ ಬಾರಿ ಪಡೆದಿದ್ದ ಬಹುಮತದ ಸರ್ಕಾರ ಉರುಳಿಬಿತ್ತು. ನಂತರದ ಸಮಯದಲ್ಲಿ ಕಲ್ಯಾಣ್ ಸಿಂಗ್ ಬಂಧನವಾಗಿ ತಿಹಾರ್ ಜೈಲಿನಲ್ಲಿ ಒಂದು ದಿನ ಗೃಹಬಂಧನದಲ್ಲಿದ್ದರು. ಅಪಾರ ರಾಮಭಕ್ತರ ಸ್ವಾಗತದೊಂದಿಗೆ ಅವರ ಬಿಡುಗಡೆಯಾಯಿತು.

2019ರ ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟಿನ ಮಹತ್ವದ ತೀರ್ಪು ರಾಮಮಂದಿರ ನಿರ್ಮಾಣಕ್ಕಾಗಿ ಸಂಪೂರ್ಣ 2.77 ಎಕರೆ ಭೂಮಿಯನ್ನು ಹಿಂದೂಗಳಿಗೆ ನೀಡುವುದರ ಮೂಲಕ ಶತಮಾನಗಳಷ್ಟು ಹಳೆಯ ವಿವಾದವನ್ನು ಮುಕ್ತಾಯಗೊಳಿಸಿತು.

ನಂತರದಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್, ಭಕ್ತಾದಿಗಳಿಂದಲೇ ಬಂದ ಕಾಣಿಕೆ ಮತ್ತು ದೇಣಿಗೆಯಿಂದ ಶ್ರೀ ರಾಮ ಜನ್ಮಸ್ಥಾನದಲ್ಲಿ ಭವ್ಯಮಂದಿರದ ನಿರ್ಮಾಣವನ್ನು ಆರಂಭಿಸಿತು. ಮಂದಿರದ ಲೋಕಾರ್ಪಣೆ, ಹಾಗೂ ಶ್ರೀ ರಾಮಲಲ್ಲಾ ನ ನೂತನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಯೂ ಜನವರಿ 22ನೇ ತಾರೀಖಿನಂದು ನೆರವೇರಲಿದೆ. ತದನಂತರ 48 ದಿನಗಳ ಮಂಡಲೋತ್ಸವ, ಜ.23 ರಿಂದ ಮಾ.10ರ ತನಕ ದಿನವೂ ರಾಮದೇವರಿಗೆ ಕಲಶಾಭಿಷೇಕ, ಯಜ್ಞಯಾಗ ಹಾಗೂ ಕೊನೆಯ ಐದುದಿನಗಳ ಕಾಲ ಬ್ರಹ್ಮಕಲಶ ನಡೆಯಲಿದ್ದು ರಾಮದೇವರ ಪ್ರತಿಷ್ಠಾಪನಾಕೈಂಕರ್ಯವು ಸಂಪೂರ್ಣವಾಗಲಿದೆ. ಧರ್ಮದ ರಕ್ಷಣೆಯೂ ಆಗಲಿದೆ.

॥ ಜೈ ಶ್ರೀ ರಾಮ್ ॥

*ಸಂಗ್ರಹ: ನಟೇಶ್ ಜೆ.ಎಸ.*

RELAX CAFE RCB BENGALURU

Visit @ HSR Layout



Opened on 01-01-2023

COFFEE SHOP with
Veg, Continental, South & North Indian Cuisine
along with Kids Amunsement &
space for Birthday Party's.



No. 2331
17th Cross,
Sector - 1
HSR Layout

# ಕಾರ್ತಿಕ ಸೋಮವಾರ ರುದ್ರಾಭಿಷೇಕದ ಚಿತ್ರಗಳು











ಚೆಲುವ ನಾರಾಯಣಸ್ವಾಮಿ, ಅಗರ



ಗೀತಾಜಯಂತಿ ಪೂಜೆ



ಗೀತಾಜಯಂತಿ ಪೂಜೆ



ವೇದಘೋಷ, ವೆಂಕಟರಮಣಸ್ವಾಮಿ ದೇವಸ್ಥಾನ




ದಿನದರ್ಶಿ 2024 - ಬಿಡುಗಡೆ ಸಮಾರಂಭ

# RSS ನ ಕೊಠಾರಿ ಸಹೋದರರು

ಕೊಠಾರಿ ಸಹೋದರರು (ರಾಮ್ ಮತ್ತು ಶರದ್) ಕೋಲ್ಕತ್ತಾದಲ್ಲಿ ಜನಿಸಿದ ಇಬ್ಬರು ಆರ್‌ಎಸ್‌ಎಸ್ ಕಾರ್ಯಕರ್ತರು. 1990 ರಲ್ಲಿ, ಅವರು ಕರಸೇವೆಗಾಗಿ ಕೋಲ್ಕತ್ತಾದಿಂದ ಅಯೋಧ್ಯೆಗೆ ಹೋದರು. ಅಯೋಧ್ಯೆಗೆ ರೈಲುಗಳು ಮತ್ತು ಬಸ್ ಸೇವೆಗಳನ್ನು ನಿಲ್ಲಿಸಿದ್ದರಿಂದ ಅವರು ಅನೇಕ ಮೈಲುಗಳಷ್ಟು ನಡೆದರು ಮತ್ತು ಪೊಲೀಸರು ಪ್ರವೇಶಿಸಲು ಪ್ರಯತ್ನಿಸುತ್ತಿರುವ ಜನರನ್ನು ಬಂಧಿಸಿ ಗಡೀಪಾರು ಮಾಡುತ್ತಿದ್ದರು.

30 ಅಕ್ಟೋಬರ್ 1990 ರಂದು ಬೆಳಿಗ್ಗೆ ಇಬ್ಬರೂ ಅಯೋಧ್ಯೆಯನ್ನು ತಲುಪಿದರು. ಅಲ್ಲಿ ಆಂದೋಲನವು ತೀವ್ರ ಸ್ವರೂಪದಲ್ಲಿತ್ತು ಮತ್ತು ಸಹೋದರರು ಮುಖ್ಯ ಬಾಬರಿ ಮಸೀದಿ ಕಟ್ಟಡವನ್ನು ಹತ್ತಿ ಅದರ ಮೇಲೆ ಕೇಸರಿ ಧ್ವಜವನ್ನು ಆರೋಹಿಸಿದರು ಎಂದು ಹೇಳಲಾಗುತ್ತದೆ. ಮುಲಾಯಂ ಸಿಂಗ್ ಯಾದವ್ ಅವರ ಆದೇಶದ ಮೇರೆಗೆ ಪೊಲೀಸರು ಅಶ್ರುವಾಯು ಮತ್ತು ಲಾಠಿ ಚಾರ್ಜ್ ಮಾಡಿ, ಕರಸೇವಕನ ಉತ್ಸಾಹವನ್ನು ತಗ್ಗಿಸಲು ವಿಫಲವಾದ ನಂತರ ಗುಂಡು ಹಾರಿಸಲು ಪ್ರಾರಂಭಿಸಿದರು. ಸಹೋದರರು ತಾವಾಗಿಯೇ ತಪ್ಪಿಸಿಕೊಂಡರು ಅಥವಾ ಪೊಲೀಸರು ಫೈಜಾಬಾದ್‌ಗೆ ಕರೆದೊಯ್ದು ಅಲ್ಲಿ ಬಿಡುಗಡೆ ಮಾಡಿದರು.

ಅವರು ತಮ್ಮ ಕೆಲಸವನ್ನು ಪೂರ್ಣಗೊಳಿಸಲು, ಮತ್ತೆ 2 ನವೆಂಬರ್ 1990 ರ ಹೊತ್ತಿಗೆ ಅಯೋಧ್ಯೆಗೆ ಮರಳಿದರು. ಮತ್ತೆ ಪೊಲೀಸ್ ಫೈರಿಂಗ್ ಪ್ರಾರಂಭವಾದಾಗ ಸಹೋದರರು ರಾಮ ಜನ್ಮಭೂಮಿ ಸೈಟ್ ಬಳಿಯ ಅಲೆಯಲ್ಲಿ ಸಿಲುಕಿಕೊಂಡರು. ಮೊದಲು ಕಿರಿಯ ಸಹೋದರನನ್ನು ಗುಂಡಿಕ್ಕಿ ಕೊಲ್ಲಲಾಯಿತು. ಕಿರಿಯ ಸಹೋದರ ಬೀಳುತ್ತಿರುವುದನ್ನು ನೋಡಿದ ಅಣ್ಣ, ರಕ್ಷಿಸಲು ಧಾವಿಸಿದಾಗ ಗುಂಡು ಹಾರಿಸಲಾಯಿತು. ಇಬ್ಬರೂ ಸ್ಥಳದಲ್ಲೇ ಸಾವನ್ನಪ್ಪಿದರು. ಇಂತಹ ಹಲವಾರು ಧರ್ಮ ರಕ್ಷಕ, ದೇಶ ಭಕ್ತ ಯುವಕರ ತ್ಯಾಗವೇ, ಇಂದಿನ ಭವ್ಯವಾದ ರಾಮಮಂದಿರದ ಫಲ ಎಂದರೆ ಅತಿಶಯೋಕ್ತಿಯಲ್ಲ. ಅವರುಗಳ ತ್ಯಾಗ, ಬಲಿದಾನವೇ, ನಮಗೆ ಇಂದು ಭವ್ಯ ಮಂದಿರವನ್ನು ಸಂಭ್ರಮಿಸಲು ಅವಕಾಶ ಮಾಡಿಕೊಟ್ಟಿದೆ.

# ಮೂಷಿಕದ ಮೂಕರೋದನ

ಬಂದಿತು ಮೂಷಿಕ ಮನೆಯೊಳಗೆ
ಸೇರಿತು ಸಾಮಾನಿನ ರಾಶಿಯೊಳಗೆ
ಹಿಡಿದೆ ಬಿಡುವ ಆತುರ ಮನದೊಳಗೆ
ಬಿಡದೆ ನಿಂತೆವು ಸಜ್ಜಾಗಿ ಮನೆಯೊಳಗೆ
ಸಂದಿಗೊಂದಿಯಲಿ ಸರಕು ಸರಂಜಾಮಿನಲಿ
ಸೇರಿತು ಇಲಿಯು ಭಯದಲ್ಲಿ
ಮನೆ ಜನರೆಲ್ಲಾ ಸೇರಿದೆವು
ಚಕ್ರವ್ಯೂಹವನು ರಚಿಸಿದೆವು
ಮನಸಿನಲೆಲ್ಲಾ ಕಾತುರ ಕೌತುಕ
ಹಿಡಿದೇಬಿಡುವ ಆತುರ
ಗುಂಪುಗೂಡಿದೆವು ಸಿದ್ಧರಾದೆವು
ಎದೆಸೆಟೆದು ಯುದ್ಧಕ್ಕೆ
ಕೈಗಿ ಸಿಕ್ಕಿದ ಕೋಲು,
ಪೊರಕೆಯನು ಹಿಡಿದೇ ನಿಂತೆವು ಸಮರಕ್ಕೆ
ಪ್ರಾಣಭಯದಲಿ ಓಡಿತು ಇಲಿಯು
ಅತ್ತ ಇತ್ತ ಸುತ್ತುತ್ತ
ಮುಗಿಯಿತು ಇಂದಿಗೆ ನನ್ನಯ ಕಾಲವು
ಎಂದಿತು ಮನದಲಿ ಬಿಕ್ಕುತ್ತ
ಕಾಡಿಸಿ ಓಡಿಸಿ ಬಿಡದೆ ಜಾಡಿಸಿ
ಹೊಡೆತವು ಬಿತ್ತು ಬೆನ್ನಲ್ಲಿ
ಅಂತೂ ಇಂತೂ ಮೂಷಿಕದಾಟವು ಮುಗಿದಿತ್ತು
ರಾಜಾರೋಷದಿ ಕಾಡಿದ ಇಲಿಯ ಪೌರುಷ
ಕೊನೆಗೊಂಡಿತ್ತು
ಬದುಕಿರುವ ತನಕ ಹೋರಾಟ
ಉಳಿವಿಗಾಗಿ ಪರದಾಟ
ಇದುವೆ ಜೀವನ ಗುದ್ದಾಟ
ಜೀವ ಬಿಡುವುದೇ ವಿಧಿಯಾಟ

– ಉಷಾಲಕ್ಷ್ಮಿ ಅರವಿಂದ ಹೊಳ್ಳ

SME | S.M.ENTERPRISES
WE MANUFACTURE & REPAIR ENERGY EFFICIENT STAR RATED TRANSFORMERS
DISTRIBUTION TRANSFORMERS
❖ Range : 15KVA – 1000KVA
❖ Services : Manufacturing, repair & reconditioning
❖ Type : Dry type & conventional type
ADDRESS
C-28 KSSIDC, Industrial Estate, 1st Stage, Mandya – 571402.
Branches : Mathikere (Bengaluru), Gubbi, Chitradurga
Mobile: +91 9845203607
Email: sme_mathikere@yahoo.com


# ಆಂಡಾಳ್ ದೇವಿಯ ತಿರುಪ್ಪಾವೈ

ಮಾರ್ಗಶಿರಮಾಸದ ಮದ್ಯಭಾಗದಿಂದ ಮಕರಸಂಕ್ರಾಂತಿ ವರೆವಿಗೆ ಧನುರ್ಮಾಸವೆಂದು ಕರೆಯಲ್ಪಡುತ್ತದೆ. ಈ ಕಾಲದಲ್ಲಿ ಶ್ರೀವೈಷ್ಣವರು ವಿಷ್ಣುದೇವಾಲಯಗಳಲ್ಲಿ ಸೂರ್ಯೋದಯಕ್ಕೆ ಮುನ್ನವೇ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಾರೆ. ಮಹಾ ಮಂಗಳಾರತಿ ಪ್ರಸಾದ ವಿನಿಯೋಗಗಳು ನಡೆಯುತ್ತವೆ.

ಸೌರಮಾನದ ಪ್ರಕಾರ ಈ ಅವಧಿಯನ್ನು ಮಾರ್ಘಳಿ ಮಾಸಂ ಎಂದು ಹೇಳಲಾಗಿದೆ. ಈ ಅವಧಿಯಲ್ಲಿ ಶ್ರೀ ವೈಷ್ಣವರು, ತಮ್ಮ ಮನೆ ಗಳಲ್ಲಿ ಮುಂಜಾನೆಯೇ ಎದ್ದು ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿ ಪೂಜಾಕಾಲದಲ್ಲಿ ಮಾತೆ ಗೋದಾದೇವಿಯು ಹಾಡಿರುವ ತಿರುಪ್ಪಾವೈ ಮೂವತ್ತು ಪಾಶುರಗಳನ್ನು ಪಾರಾಯಣ ಮಾಡಿ, ನಂತರ ನೈವೇದ್ಯ ಮಂಗಳಾರತಿ ಮಾಡಿ ಮುಗಿಸುವುದು ಸಂಪ್ರದಾಯವಾಗಿ ಬಂದಿರು ತ್ತದೆ. ಈ ವೇಳೆಯನ್ನು ಭಗವಂತನನ್ನು ಆರಾಧಿಸುವುದಕ್ಕೆ ಶ್ರೇಷ್ಠಕಾಲ ವೆಂದು ಪರಿಗಣಿಸಲಾಗಿದೆ.

ಗೋದಾದೇವಿಯನ್ನು ಆಂಡಾಳ್ ದೇವಿ ಎಂದೂ ಕರೆಯಲಾಗಿದೆ. ಈ ಪಾಶುರಗಳಲ್ಲಿ, ಆಂಡಾಳ್ ದೇವಿಯು, ಸ್ವಾಮಿ ಶ್ರೀ ರಂಗನಾಥ ರನ್ನು ಒಲಿಸಿಕೊಂಡ ರೀತಿಯನ್ನು ಬಗೆಬಗೆಯಾಗಿ ಕೊಂಡಾಡಿರುವರು. ಅದ ರಂತೆಯೇ ತನ್ನ ಇತರ ಸಖಿಯರನ್ನು ಮುಂಜಾನೆ ಎದ್ದು ಪೂಜಿಸಲು ಆಹ್ವಾನಿಸುವ ರೀತಿಯೂ ಆಪ್ಯಾಯಮಾನವಾಗಿದೆ.

ಮೂವತ್ತು ಪದ್ಯಗಳನ್ನು ದಿನಕ್ಕೆ ಒಂದರಂತೆ, ವಿಧವಿಧ ರಾಗಗಳಲ್ಲಿ ಹಾಡುವ ಪದ್ಧತಿಯೂ ಉಂಟು. ಆಂಡಾಳ್ ದೇವಿಯು ತಿರುಪ್ಪಾ ವೈ ಸಾಲುಗಳಲ್ಲಿ ವಿಶಿಷ್ಟಾದ್ವೈತದ ಹನ್ನೆರಡು ಆಳ್ವಾರರುಗಳನ್ನು ತುಂಬು ಮನ ಸ್ಸಿನಿಂದ ನೆನೆಯುತ್ತಾಳೆ.

12 ಆಳ್ವಾರರುಗಳು - ಪೂದತ್ತಾಳ್ವಾರ್, ಪೊಯ್ಗೈಆಳ್ವಾರ್, ಪೇಯಾಳ್ವಾರ್, ಪೆರಿಯಾಳ್ವಾರ್, ತಿರುಮಳಿಶೈ ಆಳ್ವಾರ್, ಕುಲಶೇಕ ರಾಳ್ವಾರ್, ತಿರುಪ್ಪಾಣಾಳ್ವಾರ್, ತೊಂಡಾರಡಿಪ್ಪೊಡಿ ಆಳ್ವಾರ್, ತಿರು ಮಂಗೈ ಆಳ್ವಾರ್, ರಾಮಾನುಜರು ಮತ್ತು ನಮ್ಮಾಳ್ವಾರ್‌ಗಳು.

ಇಲ್ಲಿ ಕಂಡುಬರುವ ಆಳ್ವಾರರು ಎಲ್ಲ ಜಾತಿಗಳಿಂದ ಬಂದವ ರಾಗಿದ್ದಾರೆ. ಭಗವಂತನನ್ನು ಒಲಿಸಿಕೊಳ್ಳಲು ಯಾವ ಜಾತಿಯವರಾದ ರೇನು? ಜ್ಞಾನಮುಖ್ಯ ಎಂಬುದನ್ನು ಆಳ್ವಾರರ ಪಂಥ ಎತ್ತಿ ಹಿಡಿಯುತ್ತದೆ. ಆಳ್ವಾರ್ ಎಂದರೆ ಭಕ್ತಿಯಲ್ಲಿ ಮುಳುಗಿದವರು ಎಂದೇ ಅರ್ಥ.

ಗೋದಾದೇವಿಯು ಈ ಎಲ್ಲಾ ಪದ್ಯಗಳಲ್ಲಿ ಭಗವಂತನಾದ ಶ್ರೀ ಕೃಷ್ಣನನ್ನು ಪಾಮರರಾದ ನಾವು ಮನಸ್ಸಿಗೆ ತಂದುಕೊಂಡರೆ, ನಮ್ಮಲ್ಲಿ ಸದ್ಬುದ್ಧಿಯು ಪ್ರಾಪ್ತವಾಗುವುದು, ಅಪಶಬ್ದಗಳು ನಾಶವಾಗುವುವು ಮತ್ತು ಯಾವ ಪಾಪಕೃತ್ಯಗಳೂ ನಮ್ಮಿಂದ ಉಂಟಾಗುವುದಿಲ್ಲ.

ನಮ್ಮ ಭಾರತದೇಶದ ಮೇಲೆ ತುಂಬು ಅಭಿಮಾನದಿಂದ ವಿಶ್ವಕ್ಕೆ ಭಾರತವು ಪೂರ್ವದಿಕ್ಕಿನಲ್ಲಿರುವುದರಿಂದ, ವಿಶ್ವಕ್ಕೆ ಬೆಳಕು ನೀಡಿ ಭಾರತ ತಾನೂ ಬೆಳಗುತ್ತಿದೆ. ಈ ದೇಶದಲ್ಲಿರುವಷ್ಟು ಭಕ್ತಿ ಪಂಥಗಳು ಬೇರೆಲ್ಲಿಯೂ ಇಲ್ಲ, ನಮ್ಮ ಗುರುಪರಂಪರೆಯ ಪೂರ್ವಾ ಚಾರ್ಯರು, ನಮ್ಮಗ್ರಂಥಗಳಾದ ರಾಮಾಯಣ, ಭಗವದ್ಗೀತೆ, ಭಾಗವತ ಮುಂತಾದು ವುಗಳನ್ನು ಮಥಿಸಿ, ಬೆಣ್ಣೆಯಂತೆ ಸುಲಭವಾಗಿ ಜೀರ್ಣಿಸಿಕೊಳ್ಳುವಂತೆ ಸರಳ ಮಾತುಗಳಲ್ಲಿ ಉಣಬಡಿಸಿದ್ದಾರೆ.

ಭಗವಂತನಿಗೆ ನಮ್ಮ ಮೇಲೆ ಅಪಾರ ಕರುಣೆ. ನಮ್ಮದು ಕಷ್ಟವೋ ಸುಖವೋ ಅದು ನಮ್ಮ ಕರ್ಮಾನುಸಾರ, ಅದನ್ನು ತಡೆದುಕೊಳ್ಳುವ ಶಕ್ತಿಯನ್ನು ಅವನೇ ಕೊಡಬೇಕಲ್ಲವೇ ಅದಕ್ಕಾಗಿಯೇ ಅವನನ್ನು ಪೂರ್ಣ ವಾಗಿ ನಂಬಬೇಕು. ಕರುಗಳು ತಮ್ಮ ತಾಯಿಯಿಂದ ಹಾಲು ಕುಡಿಯು ವಂತೆ, ಶಿಷ್ಯರು ಭಕ್ತಿಯಿಂದ ತಮ್ಮ ಗುರುಗಳಿಂದ, ಜ್ಞಾನಾಮೃತವನ್ನು ಪಡೆದು ಕೃತಾರ್ಥರಾಗಬೇಕೆಂದು ಗೋದಾದೇವಿಯು ಆಗ್ರಹಿಸುತ್ತಾಳೆ.

ಗೋದಾದೇವಿಯು ಶರಣಾಗತಿಯ ಮುಖ್ಯವಾದ ನಿಯಮ ಗಳನ್ನು ಹೀಗೆ ತಿಳಿಸುತ್ತಾಳೆ –

1. ಭಗವಂತನ ಇಷ್ಟವನ್ನು ಅರಿತು ಅದರಂತೆ ನಡೆಯುವುದು. ಭಕ್ತಭಾಗವತರನ್ನು ಸಮನಾಗಿ ಕಾಣುವುದು.
2. ಭಗವಂತನ ಇಚ್ಛೆಗೆ ವಿರುದ್ಧವಾಗಿ ನಡೆಯದೆ ಇರುವುದು.
3. ಭಗವಂತನೇ ನಮ್ಮನ್ನು ಕಾಪಾಡಬಲ್ಲವನು ಎಂಬ ಮಹಾ ವಿಶ್ವಾಸವನ್ನು ಧೃಡವಾಗಿ ಹೊಂದಿರುವುದು.
4. ನನ್ನ ರಕ್ಷಣೆಯನ್ನು ಮಾಡಿಕೊಳ್ಳಲು ನಾನು ಶಕ್ತನಲ್ಲ ಎಂಬ ಅರಿವು ಮತ್ತು ದೈನ್ಯತೆಯನ್ನು ಹೊಂದುವುದು.
5. ನಮ್ಮನ್ನು ನಾವು ಕಾಯಾ, ವಾಚಾ, ಮನಸಾ ಸಂಪೂರ್ಣವಾಗಿ ಭಗವಂತನ ಅಡಿದಾವರೆಗಳಲ್ಲಿ ಒಪ್ಪಿಸಿಕೊಳ್ಳುವುದು.
6. ನನ್ನ ಬಳಿ ಏನೂ ಇಲ್ಲ, ಎಲ್ಲ ನಿನ್ನದೇ ಎಂಬ ನಿರ್ಮಲ ಭಾವನೆ ಹೊಂದುವುದು... ಹೀಗೆ ಗೋದಾದೇವಿಯು ತಮಿಳಿನಲ್ಲಿ ರಚಿಸಿರುವ ತಿರುಪ್ಪಾವೈ ಸುಪ್ರಸಿದ್ಧವಾಗಿದೆ. ಆಂಡಾಳ್ ತಿರುವಡಿಗಳೇ ಶರಣಂ

*– ಸಂಗ್ರಹ: ವಿ. ನರಸಿಂಹಯ್ಯ*

SRI DENTAL CLINIC

Prof.Dr. B.S Srikanth Choudhary,M.D.S
Cosmetic Dentist & Endodontist

Dr. B. Prathyusha,B.D.S
Dental Surgeon

Consulting Hours:
Mon to Sat: 10 AM to 1 PM and 5 PM to 9 PM
Sunday: 10 AM to 1 PM

Phone- 9845515878
Email-drbssrikanth@gmail.com

Address:
No. 152, 24th Main,( Next to Thirumala Theatre, HSR Layout,Sector 1, Agara, Bangalore- 560012

# Radiant Systems

YASKAWA

**QUALITY PRODUCTS, TIMELY SERVICE**

RADIANT SYSTEMS, Authorized Business Partner of YASKAWA India Pvt Ltd for Karnataka region. We deal mainly with products related to Automation and Process Industries.

1) AC Drives, Servo Motor/Drives & Robotics.
2) Panel Engineering Solutions.
3) YASKAWA Solar Pump Controller with Built In MPPT.
4) Retrofit of Existing panels & PCC/MCC Panels.




**#695, 15th Cross, JP Nagar, 2nd Phase, Bangalore-560078**

**Mobile: +91 7760277175 Email: radiantspl@gmail.com**

# QUALITY INDUSTRIES

Specializing in the manufacturing of DPC aluminum wires and strips, our state-of-the-art facilities ensure precision and adherence to the highest industry standards. Beyond manufacturing excellence, we excel in the repair and reconditioning of distribution transformers, ranging from 15 KVA to 1000 KVA capacities

# D60/69 KSSIDC Industrial Estate Veerasandra Bengaluru - 560100

+91-9845203607

support@qualityindustries.co.in

GSTIN: 29ATHN5023A1ZZ

**PH: 080-41236002**

**MOB +91 8884695667**



NAVEEN

# ನ್ಯೂ ಮಂಗಳೂರು ಸ್ಟೋರ್ಸ್

# NEW MANGALORE STORES

*Dealers In: All Kinds Of Mangalore Condiments, Vegetable, House Hold Items Sweets & Much More From South Canara*



**Mixture & Muruku Items**

Mixture, Banana Chips, Chakli, Nippattu, Kodubale & All Chips Items

**Papad Items**

Papads, Sandige, Masala Menasu, Jackfruit Papad, Raagi Papad

**All Masala Items**

Sambar Powder, Rasam Powder, Chatni Powder, Vangi Bath Powder, Puliogare Gojju & Powder

**Fresh Items**

Pathrode, Shavige, Kotte Kadubu, Buns, Goli Baje, Neer Dosa, Akki Rotti,Jolada Rotti,

**Mangalore Vegetables**

Basale,Harive, Bende Kaay, Udupi Gulla & All Mangalore Vegetables

**Ayurvedic Items**

Brahmi Powder, Amrutha Balli Powder, Pain Relief Oil, Dashamoolarishta


**We Undertake All Party, Events & Festival Bulk Orders**

**080-41236002 8884695667/ 9449900519**

#1710, 19th Main Road, HSR Layout 2nd Sector, Near Sai Baba Temple Road, Bangalore-560 102

# MAGNA®

**Centres for Obesity Diabetes and Endocrinology**




## Contact : 9945953953 / 9739412608

Sai Manasa Building, #703, 1st Floor, 30th Main, BTM 2nd Stage Next to Kuvempu Nagar Bus Depot, Bengaluru - 560076.

Scan the QR Code to visit Our Website